





ಅಂಗಳದಲ್ಲಿ ಕುಳಿತಿದ್ದೆ. ಸ್ವಲ್ಪ ಹೊತ್ತಿನಲ್ಲಿ ಅಲ್ಲಿಗೆ ಬಂದ ಶಶಿ ಏನನ್ನೋ ನೆಲಕ್ಕೆ ಗಸಗಸನೆ ಉಜ್ಜಲು ಶುರುಮಾಡಿದ. ನಂತರ ಓಡಿ ಬಂದು ಇದ್ದಕ್ಕಿದ್ದಂತೆ ನನ್ನ ಕೈಗೆ ಏನನ್ನೋ ಮುಟ್ಟಿಸಿದ. ತಕ್ಷಣ ಚುರ್ರನೆ ಸುಟ್ಟ ಅನುಭವ! ಇದೇನು ಮಾಡಿಬಿಟ್ಟ ಎಂದು 'ಹಾ!' ಎಂದೆ.

ಸರಕ್ಕನೆ ಏನೋ ಚಿಕ್ಕದೊಂದನ್ನು ಕೈಯಲ್ಲಿ ಮುಚ್ಚಿಟ್ಟುಕೊಂಡು ನಾಗರಹಾವಿನ ವಿಷ್ಣುವರ್ಧನ್ ಶೈಲಿಯಲ್ಲಿ ಹ್ಹಹ್ಹಹ್ಹ ಎಂದು ಗಹಗಹಿಸಿ ನೋಡಿ ಹೊರಟುಹೋದ. ನನಗಿಂತ ಎರಡು ವರ್ಷ ದೊಡ್ಡ ಹುಡುಗನನ್ನು ಬೆನ್ನತ್ತಿ ಹೋಗಲಾರದೇ ಅಳು ಬಂದರೂ, ಅಪ್ಪ ಯಾವಾಗಲೂ 'ಅಳುವುದು ಹೇಡಿಗಳ ಲಕ್ಷಣ' ಎಂದು ಹೇಳಿದ ಮಾತು ಆಗಲೂ ಈಗಲೂ ನನ್ನ ತಲೆಯಲ್ಲಿ ಇರುತ್ತದೆ. ಅದಕ್ಕಿಂತ ಹೆಚ್ಚಾಗಿ ಅವನು ಬೆಂಕಿಯಿಲ್ಲದೇ ಯಾವ ಮಾಯದಿಂದ ನನಗೆ ಸುಟ್ಟ? ಎನ್ನುವುದು ಕುತೂಹಲ ಕೆರಳಿಸಿತ್ತು. ಮನೆಗೆ ಹೋಗಿ ಸುಟ್ಟು ಕೆಂಪಾದ ಜಾಗ ತೋರಿಸಿ, 'ಶಶಿ ಏನೋ ಉಜ್ಜಿ ನನ್ನ ಕೈ ಮೇಲಿಟ್ಟು ಸುಟ್ಟ, ಅದೇನು ಅಂತ ತೋರಿಸಲಿಲ್ಲ' ಎಂದು ಅಮ್ಮನಿಗೆ ಹೇಳಿದೆ.

ಅದಕ್ಕವರು 'ಓಹ್ ಅದಾ, ಪಾರಿವಾಳದ ಬೀಜ. ನಾವೂ ಚಿಕ್ಕಂದಿನಲ್ಲಿ ಹೀಗೇ ಮಾಡ್ತಿದ್ವಿ' ಅಂದರು. ಪಾರಿವಾಳ ಮೊಟ್ಟೆ ಇಡುವುದು ಗೊತ್ತಿತ್ತು. ಬೀಜವನ್ನೂ ಇಡಬಹುದು ಅನ್ನುವುದು ಆಶ್ಚರ್ಯ ಎನಿಸಿದರೂ, ಹೊಸತುಗಳಿಗೆ ತೆರೆದುಕೊಳ್ಳುವ ವಯಸ್ಸಾದ್ದರಿಂದ ಇದೂ ಅಂತಹ ಒಂದು ಎಂದುಕೊಂಡೆ. ಪಾರಿವಾಳದ ಬೀಜ ಹೇಗಿರುತ್ತದೆ ಎಂಬುದನ್ನು ಅಮ್ಮನಿಂದ ಕೇಳಿ ತಿಳಿದುಕೊಂಡೆ. ಹುರುಳಿ ಬೀಜದಂತೆ, ಗಾತ್ರದಲ್ಲಿ ಹೆಚ್ಚು ದಪ್ಪಗಿನ ಕೆಂಪು ಕಂದು ಬೀಜ ಎಂದು ಹೇಳಿದ್ದು ನನಗೆ ಮನದಟ್ಟಾಯಿತು.

ಚಿತ್ರದುರ್ಗದಲ್ಲಿ ಕೆಳಗೋಟೆ ಎಂಬ ಜಾಗವಿದೆ. ಹೆಚ್ಚು ಮನೆಗಳಿಲ್ಲದ ಅಲ್ಲಿ, ಜಾಲಿಮರ ಪ್ರಮುಖವಾಗಿದ್ದರೂ ಇತರ ಮರಗಳೂ ಇದ್ದವು. ಬಯಲು ಶೌಚ ಅಲ್ಲಿ ಸಾಮಾನ್ಯವಾಗಿದ್ದರಿಂದ ನಮ್ಮ ರಸ್ತೆ ಮಕ್ಕಳು ಅಲ್ಲಿ ಆಡುತ್ತಿರಲಿಲ್ಲ. ಆದರೆ ಅಲ್ಲಿರುತ್ತಿದ್ದ ಬಣ್ಣಬಣ್ಣದ ಅನೇಕ ಸಣ್ಣ ಹಕ್ಕಿಗಳನ್ನು ನೋಡುವ ಆಕರ್ಷಣೆಯಿಂದ ಆಗಾಗ ನಾನೊಬ್ಬಳೇ ಅಲ್ಲಿ ಅಲೆಯುತ್ತಿದ್ದೆ. ಒಂದು ದಿನ ಅಲ್ಲಿ ಅಲೆಯುವಾಗ ಅಮ್ಮ ಹೇಳಿದ ಗುಣಲಕ್ಷಣದ ನಾಲ್ಕಾರು ಬೀಜಗಳು ಬಿದ್ದಿದ್ದು ಕಂಡಿತು. ಪಾರಿವಾಳದ ಬೀಜ! ನಿಧಿ ಸಿಕ್ಕಂತೆ ಆರಿಸಿಕೊಂಡೆ. ಮನೆಗೆ ಬಂದು ಅದೇ ಪಾರಿವಾಳದ ಬೀಜ ಅಂತ ಅಮ್ಮನಿಂದ ಖಚಿತಪಡಿಸಿಕೊಂಡೆ. ನಂತರ ಶಶಿಗೆ ಕಾಣುವಂತೆ ಅಂಗಳದಲ್ಲಿ ಕೂತು ಕಲ್ಲಿಗೆ ಉಜ್ಜಿ ಉಜ್ಜಿ ಅಕ್ಕಪಕ್ಕದವರ ಕೈಗೆ ಚುರುಕು ಮುಟ್ಟಿಸಲು ಓಡುವಾಗ ನನಗೆ ರಹಸ್ಯ ಭೇದಿಸಿ ಗೆದ್ದ ಭಾವ. ಹೀಗೆ ಪಾರಿವಾಳ ಬೀಜ ಅನೇಕರ ನೆನಪಲ್ಲಿರಬಹುದು.

ಪಾರಿವಾಳ ಬೀಜ ಎಂದು ಕರೆಯುತ್ತಿದ್ದ ಬೀಜ ವಾಸ್ತವವಾಗಿ ಹಾಲುವಾಣದ್ದು. **Erythrina Variegata** ಇದರ ವೈಜ್ಞಾನಿಕ ಹೆಸರು. ಹೀಗೆ ಘರ್ಷಣೆಯಿಂದ ಅಷ್ಟೊಂದು ಬಿಸಿಯಾಗುವ ಗುಣ ಇರುವ ಇನ್ನೊಂದು ಬೀಜ ನಾನು ನೋಡಿಲ್ಲ. ಆಕರ್ಷಣೀಯ ಕೆಂಪು ಹೂವಿನ ಕಾರಣ **Indian Coral tree** ಎಂದು ಕರೆಯುತ್ತಾರೆ. ಕೊಂಬೆ ಮುರಿದು ನೆಟ್ಟರೂ ಚಿಗುರಿ ಹೊಸ ಗಿಡ ಬರುತ್ತದೆ. ಮುತ್ತುಗದ ಎಲೆಗಳಂತೆ ಮೂರು ಮೂರು ಎಲೆಗಳ ಜೋಡಣೆಯಾದರೂ ತೆಳುವಾಗಿರುತ್ತವೆ; ಡೈಮಂಡ್ ಆಕಾರದ ಈ ಎಲೆಗಳ ತೊಟ್ಟಿನ ಕೆಳಭಾಗದಲ್ಲಿ ಸಣ್ಣ ಗಂಟಿನಂತಹ ರಚನೆ ಇರುತ್ತದೆ. ಬೇಗ ಬೆಳೆಯುವ, ಗಡುಸುತನವಿಲ್ಲದ ಮರ.

ಮದುವೆ ಚಪ್ಪರಕ್ಕೆ ನೆಡುವ ಕಂಬದಲ್ಲಿ ಒಂದಾದರೂ ಹಾಲುವಾಣದ ಕಂಬ ನೆಡಬೇಕು ಎನ್ನುವ ಆಚರಣೆಯೂ ನಾಡಿನ ಕೆಲವು ಕಡೆಗಳಲ್ಲಿದೆ. ಮದುವೆ ಮುಗಿದ ನಂತರ ದಿನಾಲೂ ಅಂಗಳಕ್ಕೆ ಹಾಕುವ ಸಗಣಿ ನೀರು ಈ ಚಪ್ಪರಕ್ಕೆ ನೆಟ್ಟ ಕಂಬವನ್ನು ಚಿಗುರಿಸಿರುತ್ತದೆ. ಹಾಗಾಗಿ ಎಲ್ಲ ಮನೆಗಳ ಮುಂದೆಯೂ ಹಾಲುವಾಣದ ಮರ ಇರುತ್ತದೆ. ಹಾಲುವಾಣದ ಮರಕ್ಕೆ ಸಾಮಾನ್ಯವಾಗಿ ಮಲ್ಲಿಗೆ ಬಳ್ಳಿ ಹಬ್ಬಿಸಿರುತ್ತಾರೆ. ಹಾಲುವಾಣಕ್ಕೆ ಹಬ್ಬಿದ ಮಲ್ಲಿಗೆ ಬಳ್ಳಿ ಚೆನ್ನಾಗಿ ಹೂವು ಬಿಡುತ್ತದೆ. ಒಟ್ಟಿನಲ್ಲಿ ಅಂಗಳದಲ್ಲಿ ಹಾಲುವಾಣ ನೆಡುವ ಸಂಪ್ರದಾಯದಿಂದ ಮನೆಗೆ ಹೋಗಿ ಬಂದು ಮಾಡುವಾಗ ಮಲ್ಲಿಗೆ ಘಮದ ಆಹ್ಲಾದಕರ ಅನುಭವ. ಆಚರಣೆಯೇನೋ ಚೆನ್ನಾಗಿಯೇ ಇದೆ. ಆದರೆ ಈ ಅಲೈಂಗಿಕ (ಪರಾಗಸ್ಪರ್ಶ ಇಲ್ಲದ) ಸಂತಾನೋತ್ಪತ್ತಿ ಕ್ರಮದ ಕಾರಣವೋ, ಮತ್ತೊಂದೋ ಹಾಲುವಾಣದ ಮರಗಳು ಸೊರಬ, ಸಾಗರದ ಕಡೆ ಲೈಂಗಿಕ ಸಂತಾನೋತ್ಪತ್ತಿಗೆ ಬೇಕಾಗುವ ಹೂವು, ಕಾಯಿ ಬಿಡುವುದನ್ನೇ ನಿಲ್ಲಿಸಿ ವರ್ಷಗಳೇ ಕಳೆದಿವೆ. ಮರಗಳೆಷ್ಟೇ ಇದ್ದರೂ ಬೀಜ ಮಾತ್ರ ಇಲ್ಲ. ಬೇರೆ ಕಡೆ ಹೂವು, ಕಾಯಿ ಬಿಡುತ್ತಿದೆಯೋ ಗೊತ್ತಿಲ್ಲ.

ಒಟ್ಟಿನಲ್ಲಿ ನಮ್ಮ ಕಡೆ ಈಗಿರುವ ಹಾಲುವಾಣದ ಮರಗಳು ಒಂದು ರೀತಿ ನಿರ್ವೀರ್ಯ ಸಂತಾನಗಳು. ಪ್ರಾಮಾಣಿಕ ಪ್ರಯತ್ನ ನಡೆದು ಬೀಜಗಳಿಂದ ಸಸಿ ಬೆಳೆಸುವಂತಾಗಬೇಕು. ನಮ್ಮ ಮುಂದಿನ ಪೀಳಿಗೆಗೆ ಮನೆ ಮಠ ಕಟ್ಟಿಕೊಡುವ ನಾವು ಸುಂದರ ಬಾಲ್ಯವನ್ನು ಕಟ್ಟಿ ಕೊಡುವುದರತ್ತ, ಹಸುರಿನ ಸಿರಿ ಕೊಡುವುದರತ್ತಲೂ ಗಮನಹರಿಸೋಣ. ಹಾಲುವಾಣದ ಬೆಚ್ಚನೆ ನೆನಪು ನಮ್ಮದು ಮಾತ್ರವಲ್ಲ, ನಮ್ಮ ಮಕ್ಕಳದ್ದೂ ಆಗಲಿ.

ಪ್ರತಿಕ್ರಿಯಿಸಿ: **feedback@sudha.co.in**